**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

**DTE-ADMI0ACM2/22/2024**

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:28-08-2024.

**-:: ಸು ತ್ತೋಲೆ ::-**

**ವಿಷಯ:** 2024-25ನೇ ಸಾಲಿನಲ್ಲಿ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ **ಪ್ರಥಮ ಸೆಮಿಸ್ಟರ್ / ಲ್ಯಾಟರಲ್ ಎಂಟ್ರಿ 3ನೇ ಸೆಮಿಸ್ಟರ್ ಡಿಪ್ಲೋಮಾಗೆ / ವೃತ್ತಿಪರ ಅಭ್ಯರ್ಥಿಗಳ ಲ್ಯಾಟರಲ್ ಎಂಟ್ರಿ ಪ್ರವೇಶ ಅವಧಿಯನ್ನು ವಿಸ್ತರಿಸುವ** ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ಪತ್ರ ದಿನಾಂಕ: 07.05.2024, 31.05.2024, 05.06.2024, 14.06.2024, 01.07.2024, 18.07.2024, 29.07.2024, 09.08.2024 (ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳು).
2. ಈ ಕಛೇರಿ ಪತ್ರ ಸಂ. DTE-ADMI0ACM2/34/2024, ದಿ:07.06.2024 **(ಸರ್ಕಾರಿ/ಅನುದಾನಿತ ಲ್ಯಾಟರಲ್ ಎಂಟ್ರಿ)**
3. ಈ ಕಛೇರಿ ಪತ್ರ ಸಂ. DTE-ADMI0ACM2/35/2024, ದಿ:07.06.2024 **(ಖಾಸಗಿ ಲ್ಯಾಟರಲ್ ಎಂಟ್ರಿ)**
4. ಈ ಕಛೇರಿ ಸುತ್ತೋಲೆ ಪತ್ರ ಸಂ. DTE-ADMI0ACM2/30/2024, ದಿ:30.07.2024. (ವೃತ್ತಿಪರ ಅಭ್ಯರ್ಥಿಗಳಿಗೆ)
5. ಕಾರ್ಯದರ್ಶಿಗಳು, ಕರ್ನಾಟಕ ಖಾಸಗಿ ಪಾಲಿಟೆಕ್ನಿಕ್‌ಗಳ ಸಂಘ, ಬೆಂಗಳೂರು ಇವರ ಮನವಿ.

*********

2024-25ನೇ ಶೈಕ್ಷಣಿಕ ಸಾಲಿನ ಪ್ರಥಮ ಸೆಮಿಸ್ಟರ್ ಹಾಗೂ ಲ್ಯಾಟರಲ್ ಎಂಟ್ರಿ 3ನೇ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿ ಸಂಬಂಧ ಉಲ್ಲೇಖ(5)ರಲ್ಲಿ ಪಿಯುಸಿ/ಐಟಿಐ ನಲ್ಲಿ ಉತ್ತೀರ್ಣರಾಗಿರುವ ಮತ್ತು ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆ-3 ರಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಹಾಗೂ ಒಂದು ವರ್ಷ ಸೇವಾನುಭವುಳ್ಳ ವೃತ್ತಿಪರ ಅಭ್ಯರ್ಥಿಗಳಿಗೂ ಸಹ ಅನ್ವಯವಾಗುವಂತೆ ಪ್ರವೇಶಾವಧಿಯನ್ನು ವಿಸ್ತರಿಸಬೇಕೆಂದು ಕೋರಿರುವುದನ್ನು ಪರಿಗಣಿಸಿ ಒಟ್ಟಾರೆ ಎಲ್ಲಾ ಸಂಸ್ಥೆಗಳ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯ ಮೇರೆಗೆ ಪ್ರಥಮ ಸೆಮಿಸ್ಟರ್‌ನಲ್ಲಿ / ಲ್ಯಾಟರಲ್ ಎಂಟ್ರಿ 3ನೇ ಸೆಮಿಸ್ಟರ್/ವೃತ್ತಿಪರ ಲ್ಯಾಟರಲ್ ಎಂಟ್ರಿ 3ನೇ ಸೆಮಿಸ್ಟರ್‌ನಲ್ಲಿ ಭರ್ತಿ ಆಗದ ಉಳಿಕೆ ಸೀಟುಗಳಿಗೆ ***ಅಂತಿಮ ದಿ: 06.09.2024 ರವರೆಗೆ ಪ್ರವೇಶಾವಧಿಯನ್ನು ವಿಸ್ತರಿಸಿ ಅನುಮತಿ ನೀಡಲಾಗಿದೆ.***

ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ ಪಡೆದ ಅಭ್ಯರ್ಥಿಗಳ ಸಂಬಂಧದಲ್ಲಿ ನಿಯಮಾನುಸಾರ ಕನಿಷ್ಠ ಹಾಜರಾತಿಯನ್ನು ಪೂರೈಸುವ ಷರತ್ತಿಗೊಳಪಟ್ಟಿರುತ್ತದೆ. ಸದರಿ ಅಭ್ಯರ್ಥಿಗಳಿಗೆ ಪ್ರಥಮ/ತೃತೀಯ ಸೆಮಿಸ್ಟರ್ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸಲು ಸೂಕ್ತ ವ್ಯವಸ್ಥೆ ಮಾಡುವುದಲ್ಲದೆ, **ಮೇಲ್ಕಂಡ ವಿಸ್ತರಿಸಲಾದ ಅವಧಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುವುದರ ಮೂಲಕ ಪಠ್ಯಕ್ರಮದನ್ವಯ ನಿಗಧಿತ ಪಾಠ ಪ್ರವಚನಗಳನ್ನು ಮುಗಿಸುವಲ್ಲಿ ಕ್ರಮತೆಗೆದುಕೊಂಡು ಆಯುಕ್ತಾಲಯಕ್ಕೆ ವರದಿ ಮಾಡುವುದು.** ಪ್ರಥಮ ಡಿಪ್ಲೋಮಾ

ಪ್ರವೇಶಾವಧಿಯನ್ನು ಪುನಃ ವಿಸ್ತರಿಸಲಾಗುವುದಿಲ್ಲ. ಪ್ರಯುಕ್ತ, ಇದನ್ನು ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಪ್ರಾಂಶುಪಾಲರು ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಂಡು ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡುವುದು. ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಕೋರ್ಸುಗಳಲ್ಲಿ ಭರ್ತಿಯಾಗದೇ ಖಾಲಿ ಉಳಿದಿರುವ ಸೀಟುಗಳನ್ನು ಸಂಸ್ಥೆಯ ಸೂಚನಾಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿ/ಪೋಷಕರುಗಳ ಗಮನಕ್ಕೆ ತರಲು ಸೂಚಿಸಿದೆ. ಪ್ರಯುಕ್ತ, ಇದನ್ನು ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

**"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ'**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ,**
**ಬೆಂಗಳೂರು**

**ಗೆ,**

**ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರಿಗೆ ಸೂಕ್ತ ಮಾಹಿತಿಗಾಗಿ ಹಾಗೂ ಅನುಸರಣೆಗಾಗಿ** - ಸದರಿ ಸುತ್ತೋಲೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ನಿಯಮಗಳ ಪ್ರಕಾರ ತಮ್ಮ ಹಂತದಲ್ಲಿಯೇ **ದಿ:06.09.2024**ರ ಒಳಗೆ ಪ್ರವೇಶ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.

**ಪ್ರತಿ ಮಾಹಿತಿಗಾಗಿ:-**

1) ಆಯುಕ್ತರ ಆಪ್ತಶಾಖೆಗೆ.
2) ನಿರ್ದೇಶಕರ ಆಪ್ತಶಾಖೆಗೆ.
3) ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು.
4) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,
5) ಡಿವಿಪಿ(1) ಮತ್ತು ಡಿವಿಪಿ(2) ವಿಭಾಗಕ್ಕೆ.
6) ಇ.ಆರ್.ಎಸ್ ವಿಭಾಗಕ್ಕೆ - ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಹಾಗೂ ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸುವ ಬಗ್ಗೆ, ಇ-ಮಾಹಿತಿ ಪುಸ್ತಕದಲ್ಲಿ ತಿಳಿಸಿರುವಂತೆ ಕ್ರಮಜರುಗಿಸತಕ್ಕದ್ದು.
7) ಇ-ಆಡಳಿತ ವಿಭಾಗಕ್ಕೆ - ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
8) ಕಡತಕ್ಕೆ.